# 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ

## Spl.C (SC/ST) No.17/2025

| | | | |
|---|---|---|---|
| ಹೆಸರು | ಮುನಿಯಪ್ಪ | ಚಾಸಾಃ1 | ಪ್ರಾಸಾಃ 1 |
| ತಂದೆಯ ಹೆಸರು | ಲೇಟ್ ವೆಂಕಟೇಶಪ್ಪ | | |
| ವಯಸ್ಸು | 48 ವರ್ಷ | ಸಾಕ್ಷಿಯನ್ನು ದಿಃ09.06.2026 ರಂದು ಕರೆಯಿಸಿಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು. | |
| ಉದ್ಯೋಗ | ವ್ಯವಸಾಯ | | |
| ವಾಸಸ್ಥಳ | ಗಾಜಲದಿನ್ನೆ, ಕೋಲಾರ | | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ರೂಪ ನನ್ನ ಹೆಂಡತಿ, ಚಾಸಾ-3 ಲಕ್ಷ್ಮಮ್ಮ ನನ್ನ ತಾಯಿ, ಚಾಸಾ-4 ಮಂಜುನಾಥ ನನ್ನ ಬಾಮ್ಮೈದ, ಚಾಸಾ-5 ಅಂಜಿನಪ್ಪ ನನ್ನ ಭಾವ. ಈಗ ನ್ಯಾಯಾಲಯದಲ್ಲಿ ಇರುವ 2 ರಿಂದ 4 ಅರೋಪಿತರು ಗೊತ್ತು ಹಾಗೂ ಈ ದಿನ ಗೈರು ಹಾಜರಿರುವ 1ನೇ ಅರೋಪಿ ಸಿದ್ದೇಶ್ ಗೊತ್ತು, ಆತನನ್ನು ನೋಡಿದರೆ ಗುರುತಿಸುತ್ತೇನೆ (1ನೇ ಅರೋಪಿಯ ಪರ ವಕೀಲರ ಕಲಂ 355 ಬಿ ಎನ್ ಎನ್ ಎಸ್ ರಡಿಯಲ್ಲಿ ಅರ್ಜಿ ಸಲ್ಲಿಸಿ, ಅತನ ಗುರುತಿಸುವಿಕೆ ತಕರಾರು ಇಲ್ಲ ಎಂದು ನುಡಿದಿರುತ್ತಾರೆ). ನಾನು ಆದಿ ಕರ್ನಾಟಕ ಜಾತಿಗೆ ಸೇರಿದವನು ಅಗಿರುತ್ತೇನೆ ಹಾಗೂ 4 ಜನ ಅರೋಪಿತರು ಕುರುಬ ಜನಾಂಗಕ್ಕೆ ಸೇರಿಸಿದವರು ಅಗಿರುತ್ತಾರೆ. ಅರೋಪಿತರಿಗೆ ನನ್ನ ಜಾತಿ ಬಗ್ಗೆ ಗೊತ್ತಿರುತ್ತದೆ.

ಡಾ.ಬಿ.ಅರ್.ಅಂಬೇಡ್ಕರ್ ರವರ ಜನ್ಮ ದಿನದ ಆಚರಣೆಗಾಗಿ ದಿಃ13.04.2025 ರಂದು ರಾತ್ರಿ 8.00 ಗಂಟೆಗೆ ನಾನು ನಮ್ಮ ಮನೆಯ ಮುಂಭಾಗದಲ್ಲಿ ನನ್ನ ಟ್ರಾಕ್ಟರ್ ನನ್ನು ಪಲ್ಲಕ್ಕಿ ಕಟ್ಟಲು ಸಿದ್ದತೆ ಮಾಡುತಿದ್ದೆ. ಆ ಸಮಯಕ್ಕೆ 1ನೇ ಅರೋಪಿಯಾದ ಸಿದ್ದೇಶ್ ರವರು ಕಾರ್ ನಲ್ಲಿ ಬಂದರು, ಆ ಸಮಯದಲ್ಲಿ ನನ್ನ ಟ್ರಾಕ್ಟರ್ ರಸ್ತೆಗೆ ಅಡ್ಡ ಇದ್ದ ಕಾರಣ ಸದರಿ ಟ್ರಾಕ್ಟರ್ ನ್ನು ಒಂದು ಬದಿಗೆ ಸರಿಸಿ,

ಅರೋಪಿಯ ಕಾರು ಮುಂದೆ ಹೋಗಲು ಜಾಗ ಮಾಡಿಕೊಟ್ಟಿರುತ್ತೇನೆ. ಆಗ 1ನೇ ಅರೋಪಿಯು "ಹೊಲೆಯ ಜಾತಿ ನನ್ನ ಮಕ್ಕಳು, ಸೂಳೆ ಮಕ್ಕಳು" ಎಂದು ಬೈಯುತ್ತಾ ಮುಂದೆ ಹೋಗಿರುತ್ತಾನೆ. ಆಗ ನನ್ನ ತಾಯಿ ಅತನಿಗೆ "ಯಾಕೆ ಹಾಗೆ ಬೈದುಕೊಂಡು ಹೋಗುತ್ತಿಯಾ" ಎಂದು ಕೇಳಿದಾಗ, ಆತ ತನ್ನ ಕಾರನ್ನು ನಿಲ್ಲಿಸಿ, ಸಿದ್ದೇಶನ್ನು ಕಾರಿನಿಂದ ಕೆಳಗೆ ಇಳಿದು ನಮ್ಮ ಅಕ್ಕಪಕ್ಕದ ಮನೆಯವರಾದ 2 ರಿಂದ 4ನೇ ಅರೋಪಿತರನ್ನು ಕರೆಯಿಸಿಕೊಂಡು ಆನಂತರ 1ನೇ ಅರೋಪಿಯು ದೊಣ್ಣೆಯಿಂದ ನನ್ನ ಬೆನ್ನಿಗೆ ಹಾಗೂ ಎಡ ಕೈ ಮೇಲೆ ಹೊಡೆದಿರುತ್ತಾನೆ, 2ನೇ ಅರೋಪಿಯು ತನ್ನ ಕೈಯಿಂದ ನನ್ನ ಮೈ ಮೇಲೆ ಹೊಡೆದಿರುತ್ತಾನೆ, ಆ ಸಮಯದಲ್ಲಿ ಉಳಿದ ಅರೋಪಿತರು ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರು ಹಾಗೂ ಕೈ ಯಿುಂದ ಮೈ ಮೇಲೆ ಹಲ್ಲೆ ಮಾಡಿದರು, 1ನೇ ಅರೋಪಿಯು ನನ್ನನ್ನು ಉದ್ದೇಶಿಸಿ "ಏ ಬೇವರ್ಸಿ ಸೂಳೆ ನನ್ನ ಮಕ್ಕಳಾ, ನೀವು ನಮ್ಮನ್ನು ಏನು ಕಿತ್ತುಕೊಳ್ಳುವುದಕ್ಕೆ ಅಗುವುದಿಲ್ಲ, ನಮ್ಮ ತಂಟೆಗೆ ಬಂದರೆ ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿದರು". ಅರೋಪಿತರು ನನ್ನ ಮೇಲೆ ಹಲ್ಲೆ ಮಾಡಿದ್ದರಿಂದ ನಾನು ಕೆಳಗೆ ಬಿದ್ದಿರುತ್ತೇನೆ. ಆ ಸಮಯದಲ್ಲಿ ನನ್ನ ತಾಯಿ ಹಾಗೂ ನನ್ನ ಹೆಂಡತಿ ಜಗಳ ಬಿಡಿಸಲು ಬಂದಿದ್ದು 3ನೇ ಅರೋಪಿಯು ಅವರಿಗೂ ಸಹ ಕೈಯಿಂದ ಹಲ್ಲೆಮಾಡಿರುತ್ತಾನೆ, ನಂತರ ನನ್ನ ತಾಯಿ ಮತ್ತು ನನ್ನ ಹೆಂಡತಿ ಜಗಳವನ್ನು ಬಿಡಿಸಿದ್ದು, ನನ್ನ ತಾಯಿ ನೀರು ಕೊಟ್ಟಿರುತ್ತಾರೆ.

ಆನಂತರ ನನ್ನ ತಾಯಿ ನನ್ನನ್ನು ಕೋಲಾರದ ಎಸ್ ಎನ್ ಅರ್ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆಂದು ಕರೆದುಕೊಂಡು ಬಂದಿರುತ್ತಾರೆ. ಅಲ್ಲಿಗೆ ಪೋಲಿಸರು ಬಂದು ನನ್ನ ಹೇಳಿಕೆ ದೂರನ್ನು ಪಡೆದುಕೊಂಡಿರುತ್ತಾರೆ. ಸದರಿ ಹೇಳಿಕೆ ದೂರಿಗೆ ನಾನು ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಯು ತಾನು ನೀಡಿರುವ ಹೇಳಿಕೆ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ಆನಂತರ ದಿಃ16.04.2025 ರಂದು ಪೋಲಿಸರು ನಮ್ಮ ಮನೆಯ ಹತ್ತಿರ ಪಂಚನಾಮೆಗೆ ಬಂದಿದ್ದು, ನಾನು ಪೋಲಿಸರಿಗೆ ಅರೊಪಿತರು ನನ್ನ ಮೇಲೆ ಹಲ್ಲೆ ಮಾಡಿದ ಸ್ಥಳವನ್ನು ತೋರಿಸಿರುತ್ತೇನೆ. ಸದರಿ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಕ್ರಮ ಜರುಗಿಸಿರುತ್ತಾರೆ. ಆ ಸಮಯದಲ್ಲಿ ನಾನು ಅರೋಪಿತರು ಕೃತ್ಯಕ್ಕೆ ಉಪಯೋಗಿಸಿದ ದೊಣ್ಣೆಯನ್ನು ಹಾಜರುಪಡಿಸಿದ್ದು, ಪೋಲಿಸರು ಅದನ್ನು ಚಾಸಾ-4 ಮತ್ತು ಚಾಸಾ-5 ರವರ ಸಮಕ್ಷಮ ಜಪ್ತುಪಡಿಸಿಕೊಂಡು, ನನ್ನ ಸಹಿಯನ್ನು ಪಂಚನಾವುಗೆ ಪಡೆದಕೊಂಡಿರುತ್ತಾರೆ. ಸದರಿ ಪಂಚಾನಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಆಗ ಸಮಯ 5.00 ರಿಂದ 5.45 ಗಂಟೆ ಅಗಿರುತ್ತದೆ. ಪಂಚನಾಮೆ ಕಾಲಕ್ಕೆ ಪೋಲಿಸರು ಎರಡು ಪೋಟೊಗಳನ್ನು ತೆಗೆದುಕೊಂಡಿರುತ್ತಾರೆ. ಸದರಿ ಎರಡು ಪೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.3 ಮತ್ತು ನಿಪಿ.4 ಎಂದು ಗುರುತಿಸಲಾಯಿತು. ಸದರಿ ಪೋಟೋಗಳಲ್ಲಿ ಸಾಕ್ಷಿಯು ತನ್ನ ಇರುವಿಕೆ ಹಾಗೂ ಚಾಸಾ-4 ಮತ್ತು ಚಾಸಾ-5 ರವರ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೋಲಿಸರಿಗೆ ಮರು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿತರನ್ನು ನೋಡಿ ಗುರುತಿಸಿ, ಇದೇ ಆರೋಪಿತರು ಹಾಗೂ 1 ನೇ ಅರೋಪಿಯು ಆ ದಿನ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಎಸ್ ವಕೀಲರಿಂದಃ**

ನನ್ನ ಮನೆಯ ಮುಂದೆ ಸಿಮೆಂಟ್ ರಸ್ತೆಇದ್ದು, ಅದು ಸಾರ್ವಜನಿಕ ರಸ್ತೆ ಅಗಿರುತ್ತದೆ. ನಮ್ಮ ಮನೆಯ ಪಕ್ಕದಲ್ಲಿ 1 ಮತ್ತು 2 ನೇ ಅರೋಪಿಯ ಮನೆ ಇರುತ್ತದೆ. ಅವರ ಮನೆಯ ಪಕ್ಕದಲ್ಲಿ ನಾರಾಯಣಪ್ಪ ಎನ್ನುವವರ ಮನೆ ಇರುತ್ತದ,

ಸದರಿ ನಾರಾಯಣಪ್ಪರವರ ಮನೆಯ ಪಕ್ಕದಲ್ಲಿ ಮುನಿಯಪ್ಪ ಎನ್ನುವವರ ಮನೆ ಇದೆ, ಆನಂತರದಲ್ಲಿ ಆನಂದ್ ರವರ ಮನೆ ಇರುತ್ತದೆ. ಆರೋಪಿಯ ಪರ ವಕೀಲರು ಸಾಕ್ಷಿಗೆ ನಿಮ್ಮ ಮನೆಯ ಉತ್ತರ ದಿಕ್ಕಿನಲ್ಲಿ ಏನು ಇರುತ್ತದೆ ಎಂದು ಪ್ರಶ್ನೆ ಕೇಳಿದ್ದು, ಸಾಕ್ಷಿಯು ನನಗೆ ದಿಕ್ಕುಗಳ ಬಗ್ಗೆ ನನಗೆ ಗೊತ್ತಾಗಲ್ಲ ಎಂದು ನುದಿಡಿರುತ್ತಾರೆ. ಸಿದ್ದೇಶ್ ನ ಮನೆಗೆ ಬರಬೇಕಾದರೆ ಆನಂದ್ ನ ಮನೆ ಕಡೆಯಿಂದ ಬರಬೇಕು. 1 ನೇ ಆರೋಪಿಯು ಸಿದ್ದೇಶ್ ನು ಅನಂದಪ್ಪ ರವರ ಮನೆಯ ಕಡೆಗೆ ಹೋಗುವ ರಸ್ತೆಯಲ್ಲಿ ಮೇಲೆ ಕಾರಿನಲ್ಲಿ ಓಡಾಡುತ್ತಾನೆ ಎಂದರೆ ಸಾಕ್ಷಿಯು ನಮ್ಮ ಮನೆಯ ಮುಂದುಗಡೆ ಹೊಸ ರಸ್ತೆ ಅಗಿದ್ದು, ಸದರಿ ರಸ್ತೆಯ ಮೇಲೆ 1 ನೇ ಆರೋಪಿಯು ಓಡಾಡುತ್ತಾನೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಆರೋಪಿತರ ಪರ ವಕೀಲರು ಒಂದು ಪೋಟೊವನ್ನು ತೋರಿಸಿ ಸದರಿ ಪೋಟೋದಲ್ಲಿ ಕಾಣುತ್ತಿರುವ ರಸ್ತೆಯ ಮೇಲೆ ಕಲ್ಲನ್ನು ಅಡ್ಡಲಾಗಿ ನೀವೆ ನಿಲ್ಲಿಸಿರುತ್ತಿರಾ ಎಂದು ಕೇಳಿದ್ದು, ಸಾಕ್ಷಿಯು ಹೌದು ನಾನೇ ನಿಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ಸದರಿ ಪೋಟೋ ವನ್ನು ಒಪ್ಪಿಕೊಂಡ ಮೇರೆಗೆ ಸದರಿ ಪೋಟೊವನ್ನು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ಪೋಟೋದಲ್ಲಿ ನೀಲಿ ಬಣ್ಣದಲ್ಲಿ ಕಾಣುತ್ತಿರುವ ಮನೆಯು ನನ್ನ ಮನೆಯಾಗಿರುತ್ತದೆ ಎಂದು ನೋಡಿ ಗುರುತಿಸಿರುತ್ತಾರೆ. ನಮ್ಮ ಮನೆಯ ಮುಂದೆ ರಸ್ತೆ ಇರುತ್ತದೆ.

ಆ ದಿನ 1 ನೇ ಆರೋಪಿಯು ಕಾರಿನಲ್ಲಿ ನಮ್ಮ ಮನೆಯು ಮುಂದಿನ ರಸ್ತೆಯ ಮೇಲೆ ಬಂದಿರುವುದಿಲ್ಲ ಹಾಗೂ ನಾನು ದೂರಿನಲ್ಲಿ ಹೇಳಿರುವಂತೆ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆಯಿುತು ಎಂದು ಹೇಳಲಾದ ಪೂರ್ವದಲ್ಲಿ ನಮ್ಮ ಮತ್ತು ಆರೋಪಿತರ ನಡುವೆ ರಸ್ತೆಯ ವಿಷಯಕ್ಕೆ ಮನಸ್ತಾಪ ಇರುತ್ತದೆ.

1 ನೇ ಆರೋಪಿಯು ಸಿದ್ದೇಶ್‌ನು ಕಾರು ಓಡಿಸುತ್ತಾನೆ, 2 ನೇ ಆರೋಪಿ ಶಬರೀಶ್‌ನು ಕೆಲಸಕ್ಕೆ ಹೋಗುತ್ತಾನೆ, 3 ನೇ ಆರೋಪಿ ಶರಣ್ ಮನೆಯಲ್ಲಿ ಇರುತ್ತಾನೆ ಹಾಗೂ 4 ನೇ ಆರೋಪಿಯು ಆಟೋ ಓಡಿಸುತ್ತಾನೆ. ಆರೋಪಿತರು ತಮ್ಮ ಕೆಲಸಕ್ಕೆ

ಬೆಳಿಗ್ಗೆ ಹೋದರೆ ಪುನಃ ಅವರು ರಾತ್ರಿ 10.00 ಗಂಟೆಯ ನಂತರ ಬರುತ್ತಾರೆ ಎಂದರೆ ಸಾಕ್ಷಿಯು ಅವರುಗಳು ಮನೆಗೆ ಬರುವುದಕ್ಕೆ ನಿರ್ದಿಷ್ಟ ಸಮಯವಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಸಿದ್ದತೆ ಮಾಡಿದ ಪಲ್ಲಕ್ಕಿ ಮೇಲೆ ದಿಃ14.04.2025 ರಂದು ಮೆರವಣಿಗೆ ಅಗಿರುತ್ತದೆ. ಆ ದಿನದ ಮೆರವಣಿಗೆಯನ್ನು ನನ್ನ ಸ್ವಂತ ದಿಂದ ಮಾಡಿರುತ್ತೇನೆ. ನಮ್ಮ ಮನೆಯ ಸುತ್ತ ಮುತ್ತ ಎಲ್ಲಾರು ಕುರುಬ ಜನಾಂಗದವರು ಇರುತ್ತಾರೆ.

ಘಟನೆ ಸಮಯದಲ್ಲಿ ನಾನು ಸುಸ್ತಾಗಿ ಕೆಳಗೆ ಬಿದ್ದಿದ್ದೆ ಹಾಗೂ ನನ್ನ ತಾಯಿ ನನಗೆ ನೀರು ಕೊಟ್ಟಿದ್ದರು ಎಂದು ನನ್ನ ದೂರಿನಲ್ಲಿ ಬರೆದಿದ್ದೇನೆ. ನಾನು ಸುಸ್ತಾಗಿ ಬಿದ್ದ ಕಾರಣ ನನಗೆ ಏನಾಯಿತು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಗಸ್ತು ಪೋಲಿಸರು ಸ್ಥಳಕ್ಕೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಸ್ಥಳಕ್ಕೆ ಬಂದ ಗಸ್ತು ಪೋಲಿಸರಿಗೆ ನಾವು ಘಟನೆ ಬಗ್ಗೆ ಹೇಳಿರುತ್ತೇವೆ, ಆದರೆ ನಾವು ದೂರನ್ನು ನೀಡಿರುವುದಿಲ್ಲ. ನನ್ನ ಮಗ ಗಸ್ತು ಪೋಲಿಸರಿಗೆ ಕರೆ ಮಾಡಿ ಮಾಹಿತಿಯನ್ನು ನೀಡಿರುತ್ತಾನೆ. ಆ ದಿನ ಯಾವುದೇ ಘಟನೆ ನಡೆಯದೆ ಇದ್ದರು ಸಹ, ನನ್ನ ತಾಯಿ ಮತ್ತು ನನ್ನ ಹೆಂಡತಿ ಬಂದು ಗಲಾಟೆ ಬಿಡಿಸಿರುತ್ತಾರೆ ಎಂದು ಸುಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರೋಪಿತರು ಜಾತಿ ಹೆಸರಿನಿಂದ ನನಗೆ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. ಅರೋಪಿತರು ನನ್ನ ಹಲ್ಲೆ ಮಾಡಿಲ್ಲ ಹಾಗೂ ಯಾವುದೇ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

ಅರೋಪಿತರು ದೊಣ್ಣೆಯಿಂದ ಹಲ್ಲೆ ಮಾಡಿದಾಗ ರಕ್ತ ಬಂದಿರುತ್ತದೆ ಹಾಗೂ ಅದು ಬಟ್ಟೆಗೆತಾಗಿರುತ್ತದೆ. ಸದರಿ ಬಟ್ಟೆಯನ್ನು ನಾನು ಪೋಲಿಸರಿಗೆ ಕೊಟ್ಟಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಮರು ಹೇಳಿಕೆಯನ್ನು ಸಹ

ನೀಡಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಪಂಚಾನಾಮೆಯನ್ನು ಠಾಣೆಯಲ್ಲಿ ಬರೆದು, ನನ್ನ ಸಹಿಯನ್ನು ಠಾಣೆಯಲ್ಲಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

**ಓ.ಹೇ.ಕೇ.ಸ.ಇದೆ.**

**(ಮಾಯಣ್ಣ ಬಿ.ಎಲ್ )**
**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಕೋಲಾರ.**

Spl.C(SC/ST) No. /2023

(ಮುಖ್ಯ ವಿಚಾರಣೆಯನ್ನು ಘನ ಉಚ್ಚ ನ್ಯಾಯಾಲಯದ ವೀಡಿಯೋ ಕಾನ್ಫರೆನ್ಸ್ ನಿಯಮಗಳ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿದ್ದು, ಸಾಕ್ಷಿದಾರರು ರಿಮೋಟ್ ಪಾಯಿಂಟ್ ಸೆಂಟರ್ ನಲ್ಲಿ ಹಾಜರಿದ್ದು, ಅವರಿಗೆ ಸಮನ್ವಯ ಅಧಿಕಾರಿಗಳು ಪ್ರಮಾಣವನ್ನು ಬೋಧಿಸಿರುತ್ತಾರೆ.)

(**ಈ ಹಂತದಲ್ಲಿ ಎರಡು ಸೀಲದ ವಸ್ತುಗಳನ್ನು ತೆರೆಯಲು**, **ಸರ್ಕಾರಿ ಅಭಿಯೋಜಕರು ಅನುಮತಿಯನ್ನು ಕೋರಿದ್ದು**, **ಸದರಿ ಎರಡು ವಸ್ತುಗಳನ್ನು ಪರಿಶೀಲಿಸಿ**, **ನಂತರ ಅಭಿಯೋಜಕರಿಗೆ ಅವುಗಳನ್ನು ತೆರೆಯಲು ಅನುಮತಿಸಲಾಯಿತು**)